ಶ್ರೀ ಸಿದ್ದಯ್ಯ ಕಾಶೀಮಠ.—ಕನ್ನಡ ಟೈಪಿಸ್ಟುಗಳಿಗೆ ವಿಶೇಷ ಭತ್ಯವನ್ನು ಕೊಡುವ ಬಗ್ಗೆ ಆಜ್ಞೆಯನ್ನು ಮಾಡಿದ ನಂತರ ಅದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈಗ ಯಾರು ಯಾರು ಪ್ರಥಮ ದರ್ಜೆಯ ಗುಮಾಸ್ತರು ಮತ್ತು ಎರಡನೆಯ ದರ್ಜೆಯ ಗುಮಾಸ್ತರು ಕನ್ನಡ ಟೈಪ್‌ರೈಟರ್ ಮತ್ತು ಕನ್ನಡ ಶೀಘ್ರ ಲಿಪಿಯಲ್ಲಿ ಪರಿಣತರಾಗಿ ಆ ಕೆಲಸವನ್ನು ಮಾಡುತ್ತಾರೆಯೋ ಯಾರು ಯಾರು ಅದಕ್ಕೆ ಅರ್ಹರಾಗುತ್ತಾರೆಯೋ ಅವರಿಗೆ ಮಾಹೆಯಾನ 20-30 ರೂಪಾಯಿಗಳ ವಿಶೇಷ ವೇತನ ಸಿಕ್ಕುತ್ತದೆ.

ಶ್ರೀ ಎಂ. ಜಿ. ಬಣಕಾರ್.—ಸ್ವಾಮಿ, ನಾನು ಕೇಳಿರತಕ್ಕ ಪ್ರಶ್ನೆಯಲ್ಲಿ ಪ್ರಥಮ ದರ್ಜೆಯ ಗುಮಾಸ್ತರು ಮತ್ತು ಎರಡನೆಯ ದರ್ಜೆಯ ಗುಮಾಸ್ತರು ಕನ್ನಡ ಟೈಪಿಂಗ್ ಮತ್ತು ಶೀಘ್ರಲಿಪಿ ಬರತಕ್ಕವರು ಯಾರು ಇದ್ದಾರೆಯೋ ಅವರು ಈ ರಾಜ್ಯದಲ್ಲಿ ಯಾವುದೇ ಡಿಪಾರ್ಟ್‌ಮೆಂಟಿನಲ್ಲಿ ಇರಲಿ ಅವರಿಗೆ ಹೆಚ್ಚಿನ ವೇತವನ್ನು ಕೊಡುತ್ತಿದ್ದೀರಾ ಎಂದು ಕೇಳಿದ್ದೇನೆ, ಈ ಪ್ರಶ್ನೆ ಸ್ವಲ್ಪ ದೊಡ್ಡ ದಾದರೂ ಇದನ್ನು ಪರಿಶೀಲನೆ ಮಾಡಿ ಇದಕ್ಕೆ ಸಮಗ್ರವಾದ ಉತ್ತರವನ್ನು ಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈಗ ಮಾನ್ಯ ಸದಸ್ಯರು ಕೇಳಿತಕ್ಕಂತ ಪ್ರಶ್ನೆ ಏನಿದೆ ಇದು ಜನರಲ್ ಪ್ರಶ್ನೆ. ಆದ್ದರಿಂದ ಇದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ತರಿಸಿಕೊಡುತ್ತೇನೆ.

Collection of Taxes by the Bangalore Corporation

679. Sri M. S. KRISHNAN (Malleswaram).—

Will the Minister of State for Municipal Administration be pleasd to state :—

(*a*) whether Prakashnagar, Subramanyanagar, Shivanahalli, Agrahara Dasarahalli, Mariyappanapalya, Mathikere, Gurguntepalya come within the Corporation limits of Bangalore ;

(*b*) whether the voters in these areas have elected their representatives to the Bangalore City Corporation in the previous election ;

(*c*) whether taxes are being collected from the residents of these areas and if so by whom ;

(*d*) whether the Government is aware that more than one Government agency is collecting taxes in these places ;

(*e*) if so, the steps taken to see that taxes are collected by the Corporation only ?

Sri B. M. PATIL (Minister of State for Municipal Administration).—

(*a*) Yes.

(*b*) Yes.

(*c*) Tax is being collected in Prakash Nagar, Mariyappanapalaya and Subramanyapuram by the City Improvement Trust Board, Bangalore and in other areas by the Bangalore Corporation.

(*d*) No.

(*e*) Does not arise in view of reply to clause (*d*) above.

ಶ್ರೀ ಎಂ. ಎಸ್. ಕೃಷ್ಣನ್.—(ಇ)ಗೆ ಉತ್ತರವಾಗಿ ಪ್ರಕಾಶನಗರ, ಮರಿಯಪ್ಪನಪಾಳ್ಯ ಮತ್ತು ಸುಬ್ರಮಣ್ಯಪುರಗಳಲ್ಲಿ ತೆರಿಗೆಯನ್ನು ಬೆಂಗಳೂರು ನಗರಾಭಿವೃದ್ಧಿ ಮಂಡಲಿಯವರು ವಸೂಲು ಮಾಡಲಾಗುತ್ತಿದ್ದು ಉಳಿದ ಪ್ರದೇಶಗಳಲ್ಲಿ ತೆರಿಗೆಯನ್ನು ಬೆಂಗಳೂರು ಕಾರ್ಪೊರೇಷನ್ ಅವರಿಂದ ವಸೂಲು ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ. ನಿಜಾಂಶ ಇರುವುದು ಪ್ರಕಾಶನಗರ, ಮರಿಯಪ್ಪನಪಾಳ್ಯ ಮತ್ತು ಸುಬ್ರಮಣ್ಯಪುರಗಳಲ್ಲಿ ಕಾರ್ಪೊರೇಷನ್ ಅವರು ನೋಟೀಸ್ ಕಳಿಸಿ ತೆರಿಗೆ ವಸೂಲು ಮಾಡುತ್ತಿದ್ದಾರೆ. ಕೊಡದೇ ಹೋದರೆ ಮನೆಯನ್ನು ಜಪ್ತಿ ಮಾಡುವುದಕ್ಕೆ ಆದೇಶ ಕೊಡುತ್ತಿದ್ದಾರೆ; ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

†ಶ್ರೀ ಬಿ. ಎಂ. ಪಾಟೀಲ್.—ಈ ಮೂರು ಹಳ್ಳಿಗಳಲ್ಲಿ ಕಾರ್ಪೊರೇಷನ್ ಅವರು ತೆರಿಗೆ ವಸೂಲು ಮಾಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿಲ್ಲ. ಸರ್ಕಾರದ ಗಮನಕ್ಕೆ ತಂದರೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆ. ಈಗಿನ ಸರ್ಕಾರದ ಆಜ್ಞೆಯ ಪ್ರಕಾರ ಬೆಂಗಳೂರು ಕಾರ್ಪೊರೇಷನ್ ಅವರು ಈ ಹಳ್ಳಿಗಳಲ್ಲಿ ತೆರಿಗೆಯನ್ನು ವಸೂಲು ಮಾಡುವುದಕ್ಕೆ ಬರುವುದಿಲ್ಲ.

Mr. SPEAKER.—Sri Bhaskar Shetty cannot stand between the hon. Member and the Chair. He should not cross the floor.

ಶ್ರೀ ಎಂ. ಎಸ್. ಕೃಷ್ಣನ್.—ಶಿವನಹಳ್ಳಿ, ಅಗ್ರಹಾರ ದಾಸರಹಳ್ಳಿ, ಮರಿಯಪ್ಪನಪಾಳ್ಯ, ಮತ್ತಿಕೆರೆ ಮತ್ತು ಗುರುಗುಟ್ಟೆ ಹೆಸರಿನ ಹಳ್ಳಿಗಳು ಏನಿದೆ ಇಲ್ಲಿಯೂ ಕೂಡ ಕಾರ್ಪೊರೇಷನ್ ಅವರು ಅಲ್ಲಿನ ರೆವಿನ್ಯೂ ಅಥಾರಿಟೀಸ್ ಅವರು ಜಿಲ್ಲಾಧಿಕಾರಿಗಳ ಆದೇಶದ ಮೇರೆ ಅಂದರೆ ಶಾನುಭೋಗರು ಮತ್ತು ಪಟೇಲರು ತೆರಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲವೇ, ಮತ್ತು ಈ ವಿಚಾರದಲ್ಲಿ ಅಲ್ಲಿಯ ಜನರು ಕಾರ್ಪೊರೇಷನ್‌ಗೆ ರೆಪ್ರಸೆಂಟೇಷನ್ ಕೊಟ್ಟಿಲ್ಲವೇ, ಹಾಗಿದ್ದರೂ ಕೂಡ ಇಬ್ಬರು ಏಜೆನ್ಸಿಗಳು ತೆರಿಗೆ ವಸೂಲು ಮಾಡುವುದು ಸರಿಯೇ?

ಶ್ರೀ ಬಿ. ಎಂ. ಪಾಟೀಲ್.—ಈಗ ಮಾನ್ಯ ಸದಸ್ಯರು ಹೇಳುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಈಗಿನ ಆಜ್ಞೆಯ ಪ್ರಕಾರ ಈ ಹಳ್ಳಿಗಳಲ್ಲಿ ಕಾರ್ಪೊರೇಷನ್ ಅವರು ತೆರಿಗೆವಸೂಲೆ ಮಾಡಬೇಕು. ರೆವಿನ್ಯೂ ಅಥಾರಿಟಿಯವರು ಸಹ ವಸೂಲಿ ಮಾಡುತ್ತಿದ್ದರೆ ಸರ್ಕಾರದವರು ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆಂದು ಹೇಳಿದಿರಿ. ತಮ್ಮನ್ನು ನಾನು ಕೇಳಿಕೊಳ್ಳುವುದೇನೆಂದರೆ ತಕ್ಷಣವೇ ಬೆಂಗಳೂರಿಗೆ ಸೇರಿರುವ ಈ 34 ಹಳ್ಳಿಗಳು ಏನಿವೆ, ಈ ಹಳ್ಳಿಗಳಲ್ಲಿ ಎರಡು ಏಜೆನ್ಸಿಗಳು ತೆರಿಗೆಯನ್ನು ವಸೂಲು ಮಾಡಬಾರದೆಂದು ಸ್ಪಷ್ಟವಾಗಿ ಆದೇಶ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಮತ್ತು ಎರಡು ಏಜೆನ್ಸಿಗಳು ಇದ್ದರೆ ಯಾವುದಾದರು ಒಂದು ಏಜೆನ್ಸಿ ಮಾತ್ರವೇ ತೆರಿಗೆಯನ್ನು ವಸೂಲಿ ಮಾಡಬೇಕೆಂದು ಮಿಕ್ಕವರು ವಸೂಲಿ ಮಾಡಬಾರದೆಂದು ಆದೇಶ ಕೊಡುತ್ತೀರಾ?

ಶ್ರೀ ಬಿ. ಎಂ. ಪಾಟೀಲ್.—ಕಾರ್ಪೊರೇಷನ್ ಅವರಾಗಲೀ, ಬೆಂಗಳೂರು ನಗರಾಭಿವೃದ್ಧಿ ಮಂಡಲಿಯವರಾಗಲೀ ಯಾರಾದರು, ಒಬ್ಬರು ತೆರಿಗೆಯನ್ನು ವಸೂಲು ಮಾಡಬೇಕೆಂದು ಸೂಕ್ತ ಆಜ್ಞೆಯನ್ನು ಸರ್ಕಾರದಿಂದ ಕಳಿಸಿಕೊಡಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಈ ಹಳ್ಳಿಗಳಲ್ಲಿ ಒಂದು ಕಡೆ ಟ್ರಸ್ಟ್‌ಬೋರ್ಡಿನವರು ಇನ್ನೊಂದು ಕಡೆ ಕಾರ್ಪೊರೇಷನ್ ಅವರು ತೆರಿಗೆಯನ್ನು ವಸೂಲಿ ಮಾಡುತ್ತಿದ್ದಾರೆ. ಈ ರೀತಿ ವಸೂಲಿ ಮಾಡಿಯೂ ಕೂಡ ಈ ಹಳ್ಳಿಗಳಿಗೆ ನೀರಿನ ಅನುಕೂಲಗಳನ್ನು, ದೀಪದ ಅನುಕೂಲಗಳನ್ನು, ರಸ್ತೆಗಳ ಅನುಕೂಲಗಳನ್ನು ಒದಗಿಸಿಕೊಡದಿರುವುದರಿಂದ ಅಲ್ಲಿಯ ಜನರು ಈ ಅನುಕೂಲಗಳನ್ನು ಒದಗಿಸಿಕೊಡಬೇಕೆಂದು ಒಂದೇ ಸಮನೆ ಕೇಳುತ್ತಿರುವುದರಿಂದ ಈ ಬಗ್ಗೆ ಸರ್ಕಾರದವರು ಏನೇನು ಕ್ರಮ ಕೈಗೊಂಡಿದ್ದಾರೆ?

ಅಧ್ಯಕ್ಷರು.—680ನೇ ಪ್ರಶ್ನೆ ಬಂದಾಗ ಈ ಪ್ರಶ್ನೆಯನ್ನು ಕೇಳಿ.